

ರೂಮ್‌ನತ್ತ ಬ್ಯಾಟ್ ತೋರಿಸಿದರು. ಹರಿಯಾಣ ಎದುರಿನ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅಜೇಯ ಶತಕ ದಾಖಲಿಸಿದ ಅವರು ತಂಡವನ್ನು ಸೋಲಿನ ಆತಂಕದಿಂದ ಪಾರು ಮಾಡಿದ್ದರು.

‘ನಮ್ಮ ಕುಟುಂಬದಲ್ಲಿ ಈ ಹಿಂದೆ ಯಾರೂ ಕ್ರಿಕೆಟಿಗರಾಗಿರಲಿಲ್ಲ. ಆದರೆ ಎಲ್ಲರಿಗೂ ಕ್ರಿಕೆಟ್ ಪ್ರೀತಿ ಇತ್ತು. ಟಿ.ವಿಯಲ್ಲಿ ಪಂದ್ಯಗಳನ್ನು ನೋಡುತ್ತಿದ್ದೆ. ಟೆನಿಸ್ ಬಾಲ್ ಕ್ರಿಕೆಟ್ ಆಡುತ್ತಿದ್ದೆ. 8ನೇ ವಯಸ್ಸಿನಿಂದ ಕ್ರಿಕೆಟ್ ಆಟವಾಡಲು ಆರಂಭಿಸಿದೆ. ಮನೆಯ ಹತ್ತಿರ ನಡೆಯುತ್ತಿದ್ದ ಶಿಬಿರವೊಂದಕ್ಕೆ ಅಮ್ಮ ಕರೆದುಕೊಂಡು ಹೋಗಿ ಸೇರಿಸಿದ್ದರು. ಆರಂಭದ ಕೆಲವು ವರ್ಷ ಆಫ್‌ಸ್ಪಿನ್ನರ್ ಆಗಿದ್ದೆ. 14ನೇ ವಯಸ್ಸಿನಿಂದ ಬೌಲಿಂಗ್ ಬಿಟ್ಟು ಬ್ಯಾಟಿಂಗ್ ಮಾಡತೊಡಗಿದೆ’ ಎಂದು ಸ್ಮರಣ್ ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾರೆ.

2023ರಲ್ಲಿ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು 23 ವರ್ಷದೊಳಗಿನವರ ಟೂರ್ನಿಯ ಪ್ರಶಸ್ತಿ ಜಯಿಸಿತ್ತು. ಆ ಗೆಲುವಿನಲ್ಲಿಯೂ ಸ್ಮರಣ್ ಪಾತ್ರ ಸ್ಮರಣೀಯವಾಗಿತ್ತು.

ಹೋದ ವರ್ಷದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿಯೂ ಅವರು ರನ್‌ಗಳ ಹೊಳೆ ಹರಿಸಿದ್ದರು. ಅದರಲ್ಲೂ ಫೈನಲ್ ಪಂದ್ಯದಲ್ಲಿ ಅವರ ಶತಕದ ಬಲದಿಂದ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತು. ಕರ್ನಾಟಕ 5 ವರ್ಷಗಳ ನಂತರ ವಿಜಯ್ ಹಜಾರೆ ಟ್ರೋಫಿ ಗೆದ್ದಿತು. ಟೂರ್ನಿಯ 7 ಇನಿಂಗ್ಸ್‌ಗಳಲ್ಲಿ ಒಟ್ಟು 433 ರನ್‌ಗಳನ್ನು ಗಳಿಸಿದರು. ಅದರಲ್ಲಿ ಎರಡು ಶತಕ ಮತ್ತು 2 ಅರ್ಧಶತಕಗಳು ಇದ್ದವು.

ಸ್ಮರಣ್ ಈಗ ಎರಡನೇ ಋತುವಿನಲ್ಲಿ ಆಡುತ್ತಿದ್ದಾರೆ. ಒಟ್ಟು 13 ಪ್ರಥಮ ದರ್ಜೆ ಪಂದ್ಯಗಳಲ್ಲಿ 1179 ರನ್‌ಗಳನ್ನು ಕಲೆಹಾಕಿದ್ದಾರೆ. ಅದರಲ್ಲಿ ನಾಲ್ಕು ಶತಕಗಳಿವೆ.

ಲಿಸ್ಟ್ ಎ ವಿಭಾಗದ 10 ಪಂದ್ಯಗಳಲ್ಲಿ 433 ರನ್‌ಗಳನ್ನು ಪೇರಿಸಿದ್ದಾರೆ. ಅದರಲ್ಲೂ ಎರಡು ಶತಕಗಳು ಇವೆ. ಏಳು ಟಿ20 ಪಂದ್ಯಗಳಲ್ಲಿ 237 ರನ್‌ಗಳನ್ನು ಗಳಿಸಿದ್ದಾರೆ. ಎರಡು ಅರ್ಧಶತಕಗಳನ್ನು ಹೊಡೆದಿದ್ದಾರೆ.

22 ವರ್ಷದ ಸ್ಮರಣ್ ಅವರು ದೇಶಿ ಕ್ರಿಕೆಟ್ ಪ್ರಯಾಣವನ್ನು ಭರ್ಜರಿಯಾಗಿ ಆರಂಭಿಸಿದ್ದಾರೆ. ಸ್ಮರಣ್ ಅವರು ಪ್ರವರ್ಧಮಾನಕ್ಕೆ ಬಂದಿರುವುದರಿಂದ ಕರ್ನಾಟಕ ತಂಡದಲ್ಲಿ ಈಗ ‘ಸ್ಟೈಲಿಷ್’ ಎಡಗೈ ಬ್ಯಾಟರ್‌ಗಳ ಸಂಖ್ಯೆ ಹೆಚ್ಚಿದೆ. ದೇವದತ್ತ ಪಡಿಕ್ಕಲ್ ಈ ಮೊದಲೇ ಇದ್ದರು. ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಕೃಷ್ಣನ್ ಶ್ರೀಜಿತ್ ಅವರೂ ಸೇರಿಕೊಂಡಿದ್ದಾರೆ.

ಸ್ಮರಣ್ ಅವರ ಬ್ಯಾಟಿಂಗ್ ಶೈಲಿಯೂ ಆಪ್ಯಾಯಮಾನವಾಗಿದೆ. ನಿಖರವಾದ ಕಟ್‌ಗಳನ್ನು ಪ್ರಯೋಗಿಸುವ ಅವರ ಬ್ಯಾಟ್ ಸ್ವಿಂಗ್ ಕೂಡ ಅಷ್ಟೇ ಕರಾರುವಾಕ್ಕಾಗಿದೆ. ಚುರುಕಾದ ಪಾದಚಲನೆ ಅವರ ಪ್ಲಸ್ ಪಾಯಿಂಟ್. ಸ್ಪಿನ್ನರ್‌ಗಳ ಎದುರು ಸ್ವೀಪ್‌ಗಳನ್ನು ಪ್ರಯೋಗಿಸುವ ರೀತಿಯೂ ಮನಮೋಹಕ. ಭಾರತ ತಂಡದಲ್ಲಿ ಆಡುವ ಗುರಿಯೊಂದಿಗೆ ಮುನ್ನುಗ್ಗುತ್ತಿರುವ ಸ್ಮರಣ್ ಈಚೆಗೆ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ದಕ್ಷಿಣ ವಲಯ ತಂಡದಲ್ಲಿ ಆಡಿದ್ದರು. ಅಲ್ಲಿಯೂ ಒಂದು ಅರ್ಧಶತಕ ಹೊಡೆದು ತಮ್ಮ ಸಾಮರ್ಥ್ಯ ಮೆರೆದಿದ್ದರು. ಅವರ ರನ್‌ಗಳ ಬೇಟೆ ಮುಂದುವರಿಯುತ್ತಿದ್ದರೆ, ಅದಕ್ಕ ತಕ್ಕ ಸಿಹಿಫಲ ಸಿಗುವ ನಿರೀಕ್ಷೆಯೂ ಗರಿಗೆದರಿದೆ. ■

